ಮೈಸೂರ ಗೆಜಿಟ್ಟೆ

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಮೇ ತಾ। 31, ಸ್ರ್ 1884.

ಗಿ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರುವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ರೆಸಿಡೆಂಟರ ಇಲಾಖೆ.

ಇಸ್ತಿಹಾರ್ ನಾಮೆ.

ನಂ. 3. ತಾರೀಖು 7ನೇ ಮೇ 1884.

ಸ್ರ್ 1883ನೇ ಮಾರ್ಚೀ 21ನೇ ಮತ್ತು೦ 13ನೇ ನಂಬರ್ ಇಸ್ತಿಹಾರ್‌ನಾಮೆ ಅನುವರ್ತಿಸಿ, ಮೈಸೂರು ಕೀಮೆಯ ರೆಸೀಡೆಂಟರವರು, (1881ನೇ ಇಸವಿಯ XXII)ನೇ ಎಕ್ಸೈಜ್ ಆಕ್ಟಿನ 13ನೇ ಸೆಕ್ಷನ್ ನಿಬಂಧನೆಗಳನುಸರಿಸಿ, ಬೆಂಗಳೂರು ಸಿವಿಲ್ ಮತ್ತು ಮಿಲಿಟೇರಿ ಸ್ಟೇಷನ್‌ನಲ್ಲಿ, ಕಂತ್ರಿ ಸ್ಪಿರಿಟ್ ಸಾರಾಯಿ, ಕಂತ್ರೀ ಉಕ್ತಿದ ಸಾರಾಯಿ, ವ ನಿಷಾಸ್ತುಗಳು, ಇವುಗಳನ್ನು ಒಟ್ಟು ಪುರೋಕ್ಷು ಮಾಡುವ ಬಗ್ಗೆ ಲೈಸೆನ್ಸುಗಳನ್ನು ಕೊಡಲಿಕ್ಕೆ ಸದರೀ ಸ್ಟೇಷನಿನ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರಿಗೂ, ಎಕ್ಸೈಜ್ ಯಾನೇ ಸುಂಕದ ಕಲೆಕ್ಟರಿಗೂ ಅಧಿಕಾರ ಕೊಡುತ್ತಾರೆ.

ಹುಕ್ಕುಂ ಬಮೋಜೀಬ,
ಸೆಬ್. ವೈಲಿ, ಮೇಜರ್,
ರೆಸಿಡೆಂಟರ ಅಸಿಸ್ಟೆಂಟ್.

ಫಿನ್ಯಾನ್ಷಿಯಲ್ ಇಲಾಖೆ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವ

ರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಷೇಸ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರೆ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಟ್ಲ್ ಕೇಟೂದ ಡಿವಾಂಡ್ ಡ್ರಾಫ್ಟ್‌ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾದದು.

ಹೆಚ್. ಹಡ್ಸರ್ಸ್,
ಕಾಂಪ್ಟ್ರೋಲರ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 8ನೇ ಮೇ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಬಿಕ್ಕಬಳ್ಳಾಪುರದ ಟರ್ವನಲ್ಲಿರುವ ಹಳೇ ತಾಲ್ಲೂಕು ಕಚೇರಿ ಕಟ್ಟಡ ನಿವೇಶನ ಸಹಿತ ಸ॥ 1884ನೇ ಇಸವಿ ಜೂನ್ ತಾರೀಖು 2ನೇ ದಿವಿ 11 ಘಂಟೆಗೆ ಆ ತಾಲ್ಲೂಕು ಅಮಲ್ದಾರ್ರವರ ರೂಬರೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಯಿಚ್ಛೈನ್ನುಳ್ಳವರು ಆ ಕಾಲಕ್ಕೆ ಸರಿಯಾಗಿ ಹಾಜರಾಗಿ ಧಾರಾಳವಾಗಿ ಸವಾಲ್ ಮಾಡಬಹುದು, ಹರಾಜು ಕೈದಾದ ಮೇಲೆ ಬರುವ ಸವಾಲ್ ಮಂಜೂರ್ ಮಾಡಲ್ಪಡುವದಿಲ್ಲ.

2. ಈ ಹರಾಜು ದೀರ್ವಾ ಸಾಹೆಬರವರ ಮಂಜೂರಾತಿಗೆ ವಳಪಟ್ಟಿರುತ್ತೆ.

3. ಹರಾಜು ಕೈದಾದ ವಡನೆ ಚಡ ಸವಾಲ್‌ದಾರನು ಅವನ ಸವಾಲ್ ಮೊಬಲಗು ವೈಕೀ 4ರಲ್ಲಿ ವಂದು ಹಿಸ್ಸೆ ಠೇವಣಿ ಯಿಡಬೇಕು, ಯಿಡುವದಕ್ಕೆ ತಪ್ಪಿದರೆ ದುಸರಾ ಹರಾಜು ಹಾಕಿಸಲ್ಪಡುತ್ತೆ, ಕಮ್ಮಿ ಬಿದ್ದ ಮೊಬಲಗು ಚಡ ಸವಾಲ್‌ದಾರನ ಜಿಂದಗಿ ಯಿಂದ ರೆವಿನ್ಯೂ ಕಂದಾಯದ ಬಾಕೀಯಂತೆ ವಸೂಲ್ಮಾಡಲ್ಪಡುವದು, ಆ ಹರಾಜಿನಲ್ಲಿ ಜಾಸ್ತೀ ಹುಟ್ಟಿದರೆ ಚಡ ಸವಾಲ್‌ದಾರನಿಗೆ ಜಾಸ್ತೀ ಮೊಬಲಗ್ಯೆ ಹಕ್ಕು ಯಿಲ್ಲಾ, ಹರಾಜು ದೀರ್ವಾ ಸಾಹೆಬರವರಿಂದ ಮಂಜೂರ್ ಮಾಡಲ್ಪಟ್ಟ ಸಂಗತಿಯನ್ನ ಬರವಣಿಗೆ ಮೂಲಕವಾಗಿ ಚಡ ಸವಾಲ್‌ದಾರನಿಗೆ ತಿಳಿಸಿದ 3 ದಿವಸಗಳ ವಳಗಾಗಿ ಅವನು ಬಾಕೀ ಮೊಬಲಗನ್ನು ಮತ್ತು ಚಡ ಸವಾಲ್ ಮೊಬಲಗ್ಯೆ ರೂಪಾಯಿ 1ಕ್ಕೆ 1ಆಣೆ ಮೇರೆಗೆ ಲೋಕಲ್ ಸೆಸ್ ಸಹ ಪಾವತೀ ಮಾಡಿ ಕಟ್ಟಡ ಸ್ವಾಧೀನಕ್ಕೆ ಪಡಿಯಬೇಕು, ಬಾಕೀ ಹಣ ಲೊಕಲ್ ಸೆಸ್ ಸಹ ಕೊಡುವದಕ್ಕೆ ತಪ್ಪಿದರೆ ಠೇವಣಿ ಮೊಬಲಗನ್ನೆ ಸರಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಪುನಃ ಹರಾಜು ಹಾಕಿಸಿ ಲುಕಸರ್ಸಾ ಮೊಬಲಗನ್ನ ತಪ್ಪಿದ ಚಡ ಸವಾಲ್‌ದಾರನಿಂದ ರೆವಿನ್ಯು ಕಂದಾಯದಂತೆ ವಸೂಲ್ಮಾಡಲಾಧೀತು.

ಜಿ. ರಘುನಾಥರಾವ್,
ಫಾರ್ ಡೆ॥ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 21ನೇ ಏಪ್ರಿಲ್ 1884.

ಇದರಿಂದ ತಿಳಿಸಲ್ಪಡುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹಿಡುವಳೀಯಲ್ಲಿಲ್ಲದ ಕಂದಾಯ ಠರಾಯಿಸಲ್ಪಟ್ಟ ಮತ್ತು ಕಂದಾಯ ಠರಾಯಿಸಲ್ಪಡದ ತವಾಂ ಜಮಿನುಗಳು, ಗ್ರಾಮ ಬೇಲೀಗಳು, ಅಮರಾಯಿ ವ ಅಮರಾಯಿ ಬೇಲೀಗಳು, ಇನ್ನುಗಳು ಅಡಗಿರುವ ಡಿಸ್ಟ್ರಿಕ್ಟು ಜಂಗ್ಲೀಗಳ ಪಸಾರೀ ಹುಟ್ಟುವಳೀಯನ್ನು, 1885ನೇ ಮಾರ್ಚೀ 31ರ ವರಿಗೆ ಜಮಾಇಸುವ ಹಕ್ಕುದಾರೀಯು, ತಾಲ್ಲೂಕುವಾರಾಗಿ ಬಹಿರಂಗವಾದ ಹರಾಜು ಮೂಲಕ ಡೆಪ್ಯೂಟಿ ಕಮ್ಮಿಷನರ ಆಫೀಸಿನಲ್ಲಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಪ್ರೊಪೇಷನರಿಂದ, 1884ನೆ ಜೂನ್ 5ನೇ ಮಾರ್ಕ್ಯಂ ಮದ್ಯಾನ್ನ ವಿಕ್ರಯಿಸಲ್ಪಡುವದು.